# ನಗರಸಭಾ ಕಾರ್ಯಾಲಯ ಹೊಸಪೇಟೆ.

ಕ್ರಸಂ : ನಸಹೊ : ಎಸ್.ಎ.ಎಸ್. : 235 : 2007–08 ದಿನಾಂಕ: 24–11–2008.

## ಸಾರ್ವಜನಿಕ ಪ್ರಕಟಣೆ

ಹೊಸಪೇಟೆ ನಗರಸಭೆ ವ್ಯಾಪ್ತಿಯಲ್ಲಿ ಸಮಸ್ತ ಕಟ್ಟಡ ಮಾಲೀಕರಿಗೆ/ಅನುಭೋಗದಾರರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ 2008–09ನೇ ಸಾಲಿನಿಂದ ಆಸ್ತಿ ತೆರಿಗೆ ಪದ್ದತಿಗೆ ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ : 44 ದಿನಾಂಕ : 7ನೇ ಮಾರ್ಚ 2005 ಹಾಗೂ ನಗರಸಭೆ ಸಾಮಾನ್ಯ ಸಭೆ ಠರಾವು ಸಂಖ್ಯೆ : 68 ದಿನಾಂಕ : 04–10–2008 ರನ್ವಯ 2008–09ನೇ ಸಾಲಿನಿಂದ ಆಸ್ತಿ ತೆರಿಗೆಯನ್ನು ಪರಿಷ್ಕರಿಸಿ ನಿಗಧಿಪಡಿಸಲಾಗಿದೆ.

1) ಕಟ್ಟಡಗಲ ಮೌಲ್ಯಧಾರಿತ ತೆರಿಗೆಯು ಕರ್ನಾಟಕ ಮುದ್ರಾಂಕ ಕಾಯ್ದೆ ಕಲಂ 45 (ಬಿ) ರಂತೆ ನಿರ್ಧರಿಸಲಾದ ಮಾರುಕಟ್ಟೆ ಬೆಲೆಯ ಶೇಕಡ 50 ಕ್ಕೆ ಸಮನಾಗಿರುವ ಮೌಲ್ಯದ ಮೇಲೆ ತೆರಿಗೆ ನಿರ್ಧರಿಸಲಾಗುತ್ತದೆ.

2) ಖಾಲಿ ನಿವೇಶನಗಳಿಗೆ ವಿಧಿಸಿರುವ ತೆರಿಗೆ ಧರವು ಶೇಕಡ 0.1 ರಷ್ಟು ಈ ಮೊದಲಿನಂತೆ ಇರುತ್ತದೆ. ಯಾವುದೇ ಬದಲಾವಣೆ ಇರುವುದಿಲ್ಲ.

3) ವಾಸದ ಕಟ್ಟಡಗಳಿಗೆ ವಿಧಿಸಿರುವ ತೆರಿಗೆ ಧರವು ಶೇಕಡ 0.6 ರಷ್ಟು ಈ ಮೊದಲಿನಂತೆ ಇರುತ್ತದೆ. ಯಾವುದೇ ಬದಲಾವಣೆ ಇರುವುದಿಲ್ಲ.

4) ವಾಸೇತರ (ವಾಣಿಜ್ಯ) ಆಸ್ತಿಗಳ ಮೇಲೆ ವಿಧಿಸಿರುವ ತೆರಿಗೆ ಧರವು 0.9 ರಿಂದ 1.0 ಕ್ಕೆ ಪರಿಷ್ಕರಿಸಿ ನಿಗಧಿ ಪಡಿಸಲಾಗಿದೆ.

5) ವಾಸದ ಕಟ್ಟಡಗಳಿಗೆ ಸ್ವಂತ ಉಪಯೋಗಕ್ಕಾಗಿ ಶೇಕಡ 50% ರಷ್ಟು ರಿಯಾಯಿತಿ ಇರುತ್ತದೆ.

6) 2002–03 ರಿಂದ 2007–08 ರ ವರೆಗೆ ಈ ಮೊದಲನಂತೆಯೇ ಪಾವತಿಸಬೇಕು.

7) 2002–03 ರಿಂದ 2007–08 ರ ವರೆಗೆ ಸಂದಾಯಿಸದೇ ಇರುವವರು ದಿನಾಂಕ: 01–04–2008 ರಿಂದ ಪ್ರತಿ ತಿಂಗಳಿಗೆ ಶೇ. 2 ರಂತೆ ದಂಡದೊಂದಿಗೆ ಸಂದಾಯ ಮಾಡಬೇಕು.

ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯಡಿ ಈ ಮೇಲಿನಂತೆ ಆಸ್ತಿ ತೆರಿಗೆಯನ್ನು ಪಾವತಿಸಿ ನಗರಸಭೆಯೊಂದಿಗೆ ಸಹಕರಿಸಲು ಕೋರಲಾಗಿದೆ.

**ಪೌರಾಯುಕ್ತರು**
**ನಗರಸಭೆ, ಹೊಸಪೇಟೆ.**

**ಅಧ್ಯಕ್ಷರು**
**ನಗರಸಭೆ, ಹೊಸಪೇಟೆ.**